# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 326 (398)

ಮಾನ್ಯ ಸದಸ್ಯರ ಹೆಸರು : ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ)

ಉತ್ತರಿಸುವ ದಿನಾಂಕ : 18.07.2024

ಉತ್ತರಿಸುವವರು : ಮಾನ್ಯ ಮುಖ್ಯಮಂತ್ರಿಗಳು

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ | ದಿನಾಂಕ:01.04.2006 ರಿಂದ ಜಾರಿಗೆ ಬಂದಿರುವ ಹೊಸ ಪಿಂಚಣಿ ಯೋಜನೆಯಿಂದ (ಎನ್.ಪಿ.ಎಸ್) ಸರ್ಕಾರಿ ಹಾಗೂ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರು ಪಿಂಚಣಿಯಿಂದ ವಂಚಿತರಾಗಿ ಅತೀವ ಆರ್ಥಿಕ ಸಂಕಷ್ಟದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಇಲ್ಲ |
| ಆ | ರಾಜ್ಯದಲ್ಲಿ ಹಳೆ ಪಿಂಚಣಿ ಯೋಜನೆಯನ್ನು ಜಾರಿಗೆ ತರುವ ಸಂಬಂಧ ಈಗಾಗಲೇ ಹಳೆ ಪಿಂಚಣಿ ಯೋಜನೆಯನ್ನು ಜಾರಿಗೊಳಿಸಿರುವ ರಾಜ್ಯಗಳಲ್ಲಿ ಅಧ್ಯಯನ ನಡೆಸಿ, ವರದಿಯನ್ನು ಸಲ್ಲಿಸುವಂತೆ ಸರ್ಕಾರ ಅಧಿಕಾರಿಗಳ ಸಮಿತಿಯನ್ನು ರಚಿಸಿದೆಯೇ; | ಹೌದು |
| ಇ | ಹಾಗಿದ್ದಲ್ಲಿ, ಅಧಿಕಾರಿಗಳ ಸಮಿತಿಯ ಈ ಸಂಬಂಧ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿದೆಯೇ; ವರದಿಯನ್ನು ಸಲ್ಲಿಸಿದ್ದಲ್ಲಿ ಸದರಿ ವರದಿಯ ಮುಖ್ಯಾಂಶಗಳೇನು; | ಸರ್ಕಾರದ ಆದೇಶ ಸಂಖ್ಯೆ: ಆಇ-ಪಿಇಎನ್/89/2023, ದಿನಾಂಕ: 01.03.2023ರಲ್ಲಿ ಈಗಾಗಲೇ ಹಳೆ ಪಿಂಚಣಿ ಯೋಜನೆಯನ್ನು ಮರು ಜಾರಿ ಮಾಡಿರುವ ರಾಜ್ಯಗಳಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಿರುವ ಕುರಿತು ಕೈಗೊಂಡಿರುವ ಕ್ರಮಗಳ ಬಗ್ಗೆ ಅಧ್ಯಯನ ನಡೆಸಿ ವರದಿ ಸಲ್ಲಿಸಲು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿ ಆದೇಶಿಸಿದೆ. |
| ಈ | ಯಾವ ಕಾಲಮಿತಿಯಲ್ಲಿ ಸರ್ಕಾರಿ ಅನುದಾನಿತ ಶಿಕ್ಷಣ ಸಂಸ್ಥೆಗಳ ನೌಕರರಿಗೆ ಹಳೆ ಪಿಂಚಣಿ ಯೋಜನೆಯನ್ನು ಜಾರಿಗೊಳಿಸಲಾಗುವುದು; | |
| ಉ | ರಾಜ್ಯದಲ್ಲಿ ಹಳೆ ನಿವೃತ್ತಿ ವೇತನ ಪಡೆಯುತ್ತಿರುವವರ ಸಂಖ್ಯೆ ಎಷ್ಟು; ಸರ್ಕಾರ ನೌಕರರಿಗೆ ವಿತರಿಸುತ್ತಿರುವ ಹಳೆ ನಿವೃತ್ತಿ ಪಿಂಚಣಿ ಮೊತ್ತವೆಷ್ಟು; (ಪ್ರಸ್ತುತ | ರಾಜ್ಯ ಪಿಂಚಣಿ ನೌಕರರ ಸಂಖ್ಯೆ (ನಿವೃತ್ತಿ ಮತ್ತು ಕುಟುಂಬ ಪಿಂಚಣಿದಾರರು) – 5,12,359. |

| | | |
|---|---|---|
| | ಸಾಲಿನ ಮಾಹಿತಿ ನೀಡುವುದು) | ನಿವೃತ್ತಿ ಮತ್ತು ಕುಟುಂಬ ಪಿಂಚಣಿ ಪಾವತಿಸಿದ ಒಟ್ಟು ಮೊತ್ತ ( ಏಪ್ರಿಲ್ – 2024 ರಿಂದ 16.07.2024 ರವರೆಗೆ) – 6509.38 ಕೋಟಿ. |
| ಊ | ಈ ಹೊಸ ಪಿಂಚಣಿ ವ್ಯವಸ್ಥೆಯಡಿ ಕಾರ್ಯನಿರ್ವಹಿಸುತ್ತಿರುವ ನೌಕರರ ಸಂಖ್ಯೆ ಎಷ್ಟು; ಇಂತಹ ನೌಕರರನ್ನು ಹಳೆ ಪಿಂಚಣಿ ವ್ಯವಸ್ಥೆಗೆ ಜಾರಿಗೊಳಿಸಿದರೆ ತಗಲಬಹುದಾದ ಅಂದಾಜು ವೆಚ್ಚ ಎಷ್ಟು? (ವಿವರ ನೀಡುವುದು) | ದಿನಾಂಕ: 01.04.2006 ರಿಂದ ದಿ: 15.06.2024ರವರೆಗೆ ಎನ್.ಪಿ.ಎಸ್. ಯೋಜನೆಗೆ ಒಳಪಟ್ಟು NSDL-CRA ರವರಲ್ಲಿ ನೋಂದಣಿಯಾಗಿರುವ ಸರ್ಕಾರಿ ನೌಕರರ ಸಂಖ್ಯೆ: 2,79,701.<br><br>ಪಿಂಚಣಿಯು ಭವಿಷ್ಯವರ್ತಿಯಾಗಿದೆ. ಎನ್.ಪಿ.ಎಸ್. ಯೋಜನೆಗೆ ಒಳಪಡುವ ಸರ್ಕಾರಿ ನೌಕರರನ್ನು ಹಳೆ ಪಿಂಚಣಿ ವ್ಯವಸ್ಥೆಗೆ ಒಳಪಡಿಸುವ ಕ್ರಮದಿಂದ ಸರ್ಕಾರಕ್ಕೆ ಆಗಬಹುದಾದ ಆರ್ಥಿಕ ಹೊರೆಯನ್ನು ಲೆಕ್ಕಾಚಾರ ಮಾಡುವುದು ಬಹಳ ಸಂಕೀರ್ಣವಾದ ಒಂದು ಪ್ರಕ್ರಿಯೆಯಾಗಿದೆ.<br><br>ಸರ್ಕಾರಿ ನೌಕರರಿಗೆ ಲಭ್ಯವಾಗಬಹುದಾದ ವಾರ್ಷಿಕ ಬಡ್ತಿ, ತುಟ್ಟಿಭತ್ಯೆ, ಕಾಲಕಾಲಕ್ಕೆ ನೇಮಕವಾಗಬಹುದಾದ ವೇತನ ಆಯೋಗಗಳ ಶಿಫಾರಸ್ಸಿನ ಹಿನ್ನೆಲೆಯಲ್ಲಿ ಸರ್ಕಾರವು ಮಾಡಬಹುದಾದ ವೇತನ ಪರಿಷ್ಕರಣೆ ಇತ್ಯಾದಿಗಳಂತೆ Last Drawn Pay ನಿಗಧಿಯಾಗುವುದರಿಂದ ಇಂತಹ ಲೆಕ್ಕಾಚಾರಗಳನ್ನು ನಿಖರವಾಗಿ ಅಂದಾಜಿಸಲು ಸಾಧ್ಯವಿಲ್ಲ. |

ಸಂಖ್ಯೆ: ಆಇ-ಪಿಇಎನ್/199/2024

**(ಸಿದ್ದರಾಮಯ್ಯ)**
ಮುಖ್ಯಮಂತ್ರಿ